KADW210005132017

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹುಬ್ಬಳ್ಳಿ**

**ಉಪಸ್ಥಿತರುಃ** ಶ್ರೀ ವಿಶ್ವನಾಥ ಯಮಕನಮರಡಿ,
ಬಿ.ಎಸ್.ಡಬ್ಲ್ಯೂ.ಎಲ್.ಎಲ್.ಬಿ,
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಬ್ಬಳ್ಳಿ

**ಸಿ.ಸಿ.ಸಂಖ್ಯೆ 7768/2024**

**ದಿನಾಂಕ 19 ನೇ ಜೂನ್ ಮಾಹೆ 2026 ರಂದು**

ಪಿರ್ಯಾದುದಾರ ಃ ಗೋಕುಲಂ ಚಿಟ್ಸ್ ಪ್ರೈ ಲಿಮಿಟೆಡ್ ಹುಬ್ಬಳ್ಳಿ ಪರವಾಗಿ,
ಶಾಖಾ ವ್ಯವಸ್ಥಾಪಕರಾದ ಶ್ರೀ ಕೃಷ್ಣಮೂರ್ತಿ ಡಿ.ಟಿ,
ವಯಾಃ 34 ವರ್ಷ, ಉಃ ಕಛೇರಿಯ ವ್ಯವಸ್ಥಾಪಕರು,
ನಂ.#3549/ಬಿ 46 ಎ, 1 ನೇ ಅಂತಸ್ತು, ಅರಿಹಂತ
ಎಲೀಟ, ವಿದ್ಯಾನಗರ, ಹುಬ್ಬಳ್ಳಿ

(ಶ್ರೀ.ಹೆಚ್.ಎನ್. ದೊಡ್ಡಮನಿ, ವಕೀಲರು)

ವಿರುದ್ಧ

ಆರೋಪಿ ಃ ಮಲ್ಲಿಕಾರ್ಜುನ ತಂದೆ ಜಗನ್ನಾಥ ಹುಕ್ಕೇರಿ,
ವಯಾಃ 56 ವರ್ಷ, ಉದ್ಯೋಗಃ ವ್ಯವಹಾರ,
ಸಾಃ ಹಿರೇಮಠ, ಹಳೇಹುಬ್ಬಳ್ಳಿ.

( ಶ್ರೀ ಎ.ಎಸ್.ಮಾಳವದೆ, ವಕೀಲರು)

: **<u>ತೀರ್ಪು</u>** :

ಈ ಪ್ರಕರಣವನ್ನು ಪಿರ್ಯಾದುದಾರ ದಂಡ ಪ್ರಕ್ರಿಯಾ ಸಂಹಿತೆ ಕಲಂ.200 ಅಡಿಯಲ್ಲಿ ಆರೋಪಿತನ ವಿರುದ್ಧ ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧದ ಬಾಬ್ತು ದಾಖಲಿಸಿರುತ್ತಾರೆ.

2. <u>ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ</u>

ಪಿರ್ಯಾದಿದಾರರು ಗೋಕುಲಂ ಚಿಟ್ಸ್ ಪ್ರೈ ಲಿಮಿಟೆಡ್ ಹುಬ್ಬಳ್ಳಿ ಅಂತಾ ಇದ್ದು, ಆರೋಪಿಯಾದ ನೀನು ಪಿರ್ಯಾದುದಾರರ ಸಂಸ್ಥೆಯ ಸದಸ್ಯನಾಗಿದ್ದು ಪಿರ್ಯಾದಿದಾರರ ಕಂಪನಿಯ ಟಿಕೇಟ್ ಸಂಖ್ಯೆಃ G2F/0982/MSR/03 ಯಡಿಯಲ್ಲಿ ಬಿಡ್ಡಿಂಗನಲ್ಲಿ ಪಾಲ್ಗೊಂಡು ಹಣವನ್ನು ಪಡೆದುಕೊಂಡು ಸ್ವಂತಕ್ಕೆ ಬಳಸಿಕೊಂಡಿದ್ದು ಇರುತ್ತದೆ. ಸದರಿ ಹಣದ ಮರುಪಾವತಿಗಾಗಿ ಆರೋಪಿಯಾದ ನೀವು ನಿಮಗೆ ಸೇರಿದ ಕರ್ನಾಟಕ ಬ್ಯಾಂಕ ಲಿಮಿಟೆಡ್ ದುರ್ಗದಬೈಲ್, ಹುಬ್ಬಳ್ಳಿ ಶಾಖೆಯ ಚೆಕ್ ನಂ.120682 ದಿನಾಂಕ 10.04.2024 ಎಂದು ನಮೂದಿಸಿ ರೂ.3,27,453/-ಗಳ ಚೆಕ್ಕನ್ನು ಪಿರ್ಯದಿದಾರನಿಗೆ ನೀಡಿರುತ್ತಾರೆ. ನಂತರ ಪಿರ್ಯದುದಾರ ಸದರಿ ಚೆಕ್ಕನ್ನು ತಾವು ಖಾತೆ ಹೊಂದಿರುವ ಫೆಡರಲ್ ಬ್ಯಾಂಕ ಲಿಮಿಟೆಡ್ ಹುಬ್ಬಳ್ಳಿ ಶಾಖೆಗೆ ನಗದಿಕರಣಕ್ಕಾಗಿ ದಿನಾಂಕ 12.04.2024 ರಂದು ಹಾಜರುಪಡಿಸಿದ್ದು ಸದರಿ ಬ್ಯಾಂಕಿನವರು ದಿನಾಂಕ 15.04.2024 ರಂದು "ಸಾಕಷ್ಟು ಹಣ ಇರುವುದಿಲ್ಲ" ಎಂಬ ಷರಾದೊಂದಿಗೆ ಸದರಿ ಚೆಕ್ಕನ್ನು ಹಿಂದಿರುಗಿಸಿರುತ್ತಾರೆ.

3. ಚೆಕ್ ಅಮಾನ್ಯಗೊಂಡಿದ್ದರಿಂದ ಪಿರ್ಯಾದುದಾರನು ಆರೋಪಿಗೆ ದಿನಾಂಕ 30.04.2024 ರಂದು ಹಣ ಬೇಡಿಕೆ ಇಟ್ಟು ನೊಂದಾಯಿತ ಅಂಚೆ ಮೂಲಕ ಕಾನೂನುಬದ್ಧ ತಿಳುವಳಿಕೆ ಪತ್ರವನ್ನು ನೀಡಿ ಹಣ ಮರುಪಾವತಿಸುವಂತೆ ಬೇಡಿಕೆ ಇಟ್ಟಿರುತ್ತಾರೆ. ಆದರೂ ಸಹ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ. ಹೀಗಾಗಿ ಪಿರ್ಯಾದುದಾರ ಬೇರೆ ದಾರಿ ಕಾಣದೆ ಈ ದೂರನ್ನು ದಾಖಲಿಸಿದ್ದು ಇರುತ್ತದೆ.

4. ಈ ದೂರನ್ನು ದಾಖಲಿಸಿದ ನಂತರ ದೂರನ್ನು ಸಮಗ್ರವಾಗಿ ಪರಿಶೀಲಿಸಿ ವರ್ಗಾವಣೆ ಲಿಖಿತಗಳ ಅಧಿನಿಯಮ ಕಲಂ.138 ರ ಅಡಿಯಲ್ಲಿ ಸಂಜ್ಞಾನವನ್ನು

ತೆಗೆದುಕೊಂಡು ಮತ್ತು ಪಿರ್ಯಾದುದಾರರ ಪ್ರಮಾಣೀಕೃತ ಹೇಳಿಕೆಯನ್ನು ದಾಖಲಿಸಿಕೊಂಡು, ಸಾಕಷ್ಟು ಸಾಕ್ಷ್ಯಾಧಾರಗಳು ಮೇಲ್ನೋಟದಲ್ಲಿ ಕಂಡು ಬಂದಿರುವುದರಿಂದ ಆರೋಪಿತನ ವಿರುದ್ಧ ಅಪರಾಧಿಕ ಪ್ರಕರಣವನ್ನು ದಾಖಲಿಸಿಕೊಂಡು, ಆದೇಶಿಕೆಯನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಆದೇಶಿಕೆಯು ಆರೋಪಿತನಿಗೆ ಜಾರಿಯಾದ ನಂತರ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನು ಪಡೆದುಕೊಂಡಿರುತ್ತಾನೆ. ನ್ಯಾಯಾಲಯವು ಆರೋಪಿತನ ಮೇಲೆ ಆಪಾದನೆಯನ್ನು ರಚಿಸಿರುತ್ತದೆ. ಆರೋಪಿತನು ತನ್ನ ಮೇಲಿನ ಆಪಾದನೆಯನ್ನು ಅಲ್ಲಗಳೆದಿದ್ದು ತಾನು ಪ್ರಕರಣವನ್ನು ನಡೆಸುತ್ತೇನೆಂದು ನುಡಿದಿರುತ್ತಾನೆ.

5. ಪಿರ್ಯಾದುದಾರರು ತನ್ನ ಪ್ರಕರಣವನ್ನು ರುಜುವಾತುಪಡಿಸಲು ಪ್ರಮಾಣಿಕೃತ ಹೇಳಿಕೆಯನ್ನು ಸಲ್ಲಿಸಿದ್ದು, ಒಟ್ಟು 8 ದಾಖಲೆಗಳನ್ನು ಹಾಜರುಪಡಿಸಿ, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 8 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಅದೇ ತೆರನಾಗಿ ಆರೋಪಿತನು ನಿಡಿ.1 ರಿಂದ 5 ದಾಖಲೆಗಳನ್ನು ಪಿರ್ಯಾದಿಯನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ಮುಖಾಬಲೆ ಮಾಡಿ ಗುರುತಿಸಿಕೊಂಡಿರುತ್ತಾರೆ ಮತ್ತು ತನ್ನ ಪರವಾಗಿ ತಾನಾಗಲೀ ಅಥವಾ ಇತರೆ ಯಾವುದೇ ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ.

6. ಪಿರ್ಯಾದಿ ಮತ್ತು ಆರೋಪಿ ಪರ ವಕೀಲರು ಮಂಡಿಸಿದ ವಾದ-ವಿವಾದವನ್ನು ಆಲಿಸಲಾಯಿತು. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1. ಆರೋಪಿಯಾದ ನೀವು ಪಿರ್ಯಾದುದಾರರ ಸಂಸ್ಥೆಯ ಸದಸ್ಯನಾಗಿದ್ದು ಪಿರ್ಯಾದಿದಾರರ ಕಂಪನಿಯ ಟಿಕೇಟ್ ಸಂಖ್ಯೆ: G2F/0982/MSR/03 ರಡಿಯಲ್ಲಿ ಬಿಡ್ಡಿಂಗನಲ್ಲಿ ಪಾಲ್ಗೊಂಡು ಹಣವನ್ನು ಪಡೆದುಕೊಂಡು ಸ್ವಂತಕ್ಕೆ ಬಳಸಿ ಸದರಿ ಹಣದ ಮರುಪಾವತಿಗಾಗಿ ಆರೋಪಿಯಾದ ನೀವು ತಮಗೆ ಸೇರಿದ ಕರ್ನಾಟಕ ಬ್ಯಾಂಕ ಲಿಮಿಟೆಡ್ ದುರ್ಗದಬೈಲ್, ಹುಬ್ಬಳ್ಳಿ ಶಾಖೆಯ ಚೆಕ್ ನಂ.120682 ದಿನಾಂಕ 10.04.2024 ಎಂದು ನಮೂದಿಸಿ ರೂ.3,27,453/-ಗಳ ಚೆಕ್ಕನ್ನು ಪಿರ್ಯದಿದಾರನಿಗೆ ನೀಡಿರುತ್ತೀರಿ.

ನಂತರ ಪಿರ್ಯದುದಾರ ಸದರಿ ಚೆಕ್ಕನ್ನು ತಾವು ಖಾತೆ ಹೊಂದಿರುವ ಫೆಡರಲ್ ಬ್ಯಾಂಕ ಲಿಮಿಟೆಡ್ ಹುಬ್ಬಳ್ಳಿ ಶಾಖೆಗೆ ನಗದಿಕರಣಕ್ಕಾಗಿ ದಿನಾಂಕ 12.04.2024 ರಂದು ಹಾಜರುಪಡಿಸಿದ್ದು ಸದರಿ ಬ್ಯಾಂಕಿನವರು ದಿನಾಂಕ 15.04.2024 ರಂದು "ಸಾಕಷ್ಟು ಹಣ ಇರುವುದಿಲ್ಲ" ಎಂಬ ಷರಾದೊಂದಿಗೆ ಸದರಿ ಚೆಕ್ಕನ್ನು ಹಿಂದಿರುಗಿಸಿರುತ್ತಾರೆ. ನಂತರ ಚೆಕ್ ಅಮಾನ್ಯಗೊಂಡಿದ್ದರಿಂದ ಪಿರ್ಯಾದುದಾರರು ತಮಗೆ ದಿನಾಂಕ 30.04.2024 ರಂದು ಹಣ ಬೇಡಿಕೆ ಇಟ್ಟು ನೊಂದಾಯಿತ ಅಂಚೆ ಮೂಲಕ ಕಾನೂನುಬದ್ಧ ತಿಳುವಳಿಕೆ ಪತ್ರವನ್ನು ನೀಡಿ ಹಣ ಮರುಪಾವತಿಸುವಂತೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ನೋಟೀಸು ಜಾರಿಯಾಗಿದ್ದರೂ ಸಹ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಹಾಗಾಗಿ ಸದರಿ ಹಣವು ಕಾನೂನು ಬದ್ದವಾಗಿ ವಸೂಲಿ ಮಾಡಿಕೊಳ್ಳುವ ಹಣವಾಗಿರುತ್ತದೆ ಎಂದು ರುಜುವಾತು ಪಡಿಸಿರುತ್ತಾರೆಯೇ?

2. ಏನು ಆದೇಶ?

7. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರವು ಈ ಕೆಳಕಂಡ ಕಾರಣಗಳಂತೆ ಇರುತ್ತದೆಃ

ಅಂಶ-1 ನಕಾರಾತ್ಮಕವಾಗಿ

ಅಂಶ-2 ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

8. ಅಂಶ ಸಂಖ್ಯೆ.1 : ಸದರಿ ಪ್ರಕರಣವನ್ನು ಪಿರ್ಯಾದುದಾರನು ಆರೋಪಿತನ ವಿರುದ್ದ ವರ್ಗಾವಣೆಯ ಲಿಖಿತಗಳ ಅಧಿನಿಯಮ 1881 ರ ಕಲಂ 138 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದ ಬಾಬ್ತು ದಾಖಲಿಸಿರುತ್ತಾರೆ. ಸದರಿ ಅಪರಾಧದ ಪ್ರಮುಖ ಘಟಕಾಂಶಗಳನ್ನು ಗಮನಿಸಿದಾಗ 3 ತಿಂಗಳಲ್ಲಿ ಬ್ಯಾಂಕಿಗೆ ನಗದೀಕರಣಕ್ಕಾಗಿ ಚೆಕ್ಕನ್ನು ಹಾಜರುಪಡಿಸತಕ್ಕದು, ಸದರಿ ಚೆಕ್‌ನ್ನು ಹಾಜರುಪಡಿಸಿದ ನಂತರ ಚೆಕ್ ಅಮಾನ್ಯಗೊಂಡ ದಿನಾಂಕದಿಂದ 30 ದಿನಗಳಲ್ಲಿ ಹಣವನ್ನು ಬೇಡಿಕೆ ಇಟ್ಟು ಕಾನೂನುಬದ್ಧ ತಿಳುವಳಿಕೆ ಪತ್ರವನ್ನು ನೀಡತಕ್ಕದ್ದು, ಸದರಿ ತಿಳುವಳಿಕೆಯ ಪತ್ರವು ಜಾರಿಯಾದ ದಿನಾಂಕದಿಂದ 15 ದಿನಗಳು ಮುಕ್ತಾಯವಾದ ನಂತರ 30 ದಿನಗಳ ಒಳಗಾಗಿ ಪ್ರಕರಣವನ್ನು

ದಾಖಲಿಸಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ಈ ಮೇಲ್ಕಾಣಿಸಿದ ಘಟಕಾಂಶಗಳು ಪಾಲನೆಯಾಗಿರುತ್ತವೆ.

9. ಪಿರ್ಯಾದುದಾರರ ಪ್ರಮಾಣಿಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಿದ್ದು ಮತ್ತು ಒಟ್ಟು 8 ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 8 ಎಂದು ಗುರುತಿಸಿಕೊಂಡಿರುತ್ತಾರೆ. ಚೆಕ್ಕನ್ನು ನಿಪಿ.1 ಎಂದು, ಬ್ಯಾಂಕಿನವರು ನೀಡಿದ ಹಿಂಬರಹ ನಿಪಿ.2 ಎಂದು, ಕಛೇರಿಯ ಕಾನೂನು ತಿಳುವಳಿಕೆ ಪತ್ರವನ್ನು ನಿಪಿ.3 ಎಂದು, ಅಂಚೆ ರಸೀದಿಯನ್ನು ನಿಪಿ.4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ.5 ಎಂದು, ಸಾಲದ ಖಾತೆಯ ವಿವರ ಪಟ್ಟಿಯನ್ನು ನಿಪಿ.6 ಎಂದು, ಅಧಿಕಾರ ಪತ್ರದ ದೃಢೀಕೃತ ನಕಲನ್ನು ನಿಪಿ.7 ಎಂದು, ದೂರನ್ನು ನಿಪಿ.8 ಎಂದು ಗುರುತಿಸಿಕೊಂಡಿರುತ್ತಾರೆ. ಅದೇ ತೆರನಾಗಿ ಆರೋಪಿತನು ನಿಡಿ.1 ರಿಂದ 4 ದಾಖಲೆಗಳನ್ನು ಪಿರ್ಯಾದಿಯನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ಮುಖಾಬಲೆ ಮಾಡಿ ಗುರುತಿಸಿಕೊಂಡಿರುತ್ತಾರೆ ಮತ್ತು ತಾನಾಗಲೀ ಅಥವಾ ತನ್ನ ಪರವಾಗಿ ಆಗಲೀ ಯಾವುದೇ ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ. ಪಿರ್ಯಾದುದಾರರ ಮತ್ತು ಆರೋಪಿ ಪರ ಮಂಡಿಸಿರುವ ಸಾಕ್ಷ್ಯವನ್ನು ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ನಿಷ್ಕರ್ಷಿಸಬೇಕಾದ ಅನಿವಾರ್ಯತೆ ಇರುತ್ತದೆ.

10. ಚೆಕ್ಕು ನಿಪಿ.1, ಬ್ಯಾಂಕಿನವರು ನೀಡಿದ ಹಿಂಬರಹ ನಿಪಿ.2, ಕಛೇರಿಯ ಕಾನೂನು ತಿಳುವಳಿಕೆ ಪತ್ರ ನಿಪಿ.3, ಅಂಚೆ ರಸೀದಿ ನಿಪಿ.4, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ.5. ನಿಪಿ-1 ಚೆಕ್ ಆರೋಪಿತನಿಗೆ ಸೇರಿದ್ದಾಗಿರುತ್ತದೆ. ಸದರಿ ಚೆಕ್ಕನ್ನು ಪಿರ್ಯಾದುದಾರರು ತನ್ನ ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತಾನೆ. ಸದರಿ ಬ್ಯಾಂಕಿನವರು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ಸಾಕಷ್ಟು ಹಣ ಇರುವುದಿಲ್ಲ" ಎಂಬ ಷರಾದೊಂದಿಗೆ ಚೆಕ್ಕನ್ನು ಮರಳಿಸಿರುತ್ತಾರೆ. ನಂತರ ಪಿರ್ಯಾದಿಯು ಆರೋಪಿತನಿಗೆ ಹಣ ಬೇಡಿಕೆ ಇಟ್ಟು ಲಿಖಿತವಾಗಿ ಕಾನೂನು ತಿಳುವಳಿಕೆ ಪತ್ರವನ್ನು ನೀಡಿರುತ್ತಾನೆ. ಈ ಮೇಲಿನ ದಾಖಲೆಗಳಿಂದ ಮತ್ತು ಸಂಗತಿಗಳಿಂದ ಲಿಖಿತ ವರ್ಗಾವಣೆಯ ಅಧಿನಿಯಮದ ಕಲಂ.138 ರಡಿಯಲ್ಲಿನ ಪ್ರಾಥಮಿಕ ಘಟಕಾಂಶಗಳ ಪಾಲನೆ ಆಗಿರುತ್ತದೆ.

11. ಈ ಪ್ರಕರಣದ ವಸ್ತುಸ್ಥಿತಿಗೆ ಬರುವ ಪೂರ್ವದಲ್ಲಿ ಅಪರಾಧಿಕ ನ್ಯಾಯಶಾಸ್ತ್ರದಂತೆ ಅಭಿಯೋಜನೆಯು/ಪಿರ್ಯಾದಿಯು ಆರೋಪಿ ಮೇಲಿರುವ ಗುರುತರವಾದ ಅಪರಾಧವನ್ನು ಸಂಶಾಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯನ್ನು

ಹೊಂದಿರುತ್ತಾನೆ. ಆದರೆ ವರ್ಗಾವಣೆ ಲಿಖಿತಗಳ ಅಧಿನಿಯಮ ಕಲಂ.138 ರಡಿಯಲ್ಲಿನ ಪ್ರಕರಣದ ವ್ಯವಹರಣೆಗೆ ಸಂಬಂಧಿಸಿದಂತೆ ಗಮನಿಸಿದಾಗ ಕಂಡುಬರುವುದೇನೆಂದರೆ ಸದರಿ ಈ ವರ್ಗಾವಣೆ ಲಿಖಿತಗಳ ಅಧಿನಿಯಮದಡಿಯಲ್ಲಿನ ಪ್ರಕರಣವು ಅರೆ ಅಪರಾಧಿಕ ಸ್ವರೂಪದ ಪ್ರಕರಣವಾಗಿರುತ್ತದೆ. ಇಂತಹ ಸ್ವರೂಪದ ಪ್ರಕರಣಗಳಲ್ಲಿ ಸಂಶಾಯಾತೀತವಾಗಿ ರುಜುವಾತುಪಡಿಸುವುದು ಪೂರ್ವಭಾವನೆಗೆ ಒಳಪಟ್ಟಿರುತ್ತದೆ. ಆ ಬಗ್ಗೆ ವರ್ಗಾವಣೆಗಳ ಲಿಖಿತ ಅಧಿನಿಯಮದ ಕಲಂಗಳಾದ 118, 139 ಮತ್ತು 146 ರಡಿಯಲ್ಲಿ ಪೂರ್ವ ಭಾವನೆ ಕುರಿತು ತಿಳಿಸುತ್ತವೆ. ಸದರಿ ಪೂರ್ವಭಾವನೆಯು ಅಂತಿಮ ಮತ್ತು ನಿರ್ಣಾಯಕ ಪೂರ್ವಭಾವನೆಯಲ್ಲ. ಆದರೆ ಸದರಿ ಪೂರ್ವಭಾವನೆ ಹೊಂದಲು ಕೆಲವು ಸಂಗತಿಗಳ ಆಧಾರದಿಂದ ಕಾನೂನಿನಡಿಯಲ್ಲಿ ಅವಕಾಶ ಮಾಡಿಕೊಡುತ್ತದೆ. ಸದರಿ ಪೂರ್ವಭಾವನೆಯನ್ನು ಖಂಡಿಸಲು ಆರೋಪಿಗೆ ಖಂಡನಾರ್ಹ ಸಾಕ್ಷ್ಯದ ಮೂಲಕ ಕಾನೂನಿನಡಿಯಲ್ಲಿ ಅವಕಾಶ ಇದೆ. ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಕರಣ ಪರಿಗಣಿಸಬೇಕಾಗಿರುತ್ತದೆ.

12. ಈ ಪ್ರಕರಣದ ವಸ್ತುಸ್ಥಿತಿಗೆ ಬರುವುದಾದರೆ, ಆರೋಪಿಯು ಪಿರ್ಯಾದಿ ಸಂಸ್ಥೆಯಿಂದ ಬಿಡ್ ಮುಖಾಂತರ ಹಣವನ್ನು ಪಡೆದುಕೊಂಡಿದ್ದು, ಸದರಿ ಹಣದ ಮರುಪಾವತಿಗಾಗಿ ಆರೋಪಿಯು ರೂ.3,27,453/-ಗಳ ಚೆಕ್ಕನ್ನು ಪಿರ್ಯಾದಿಗೆ ನೀಡಿರುತ್ತಾನೆ.

13. ಈ ಪ್ರಕರಣದಲ್ಲಿ ಆರೋಪಿತನು ತೆಗೆದುಕೊಳ್ಳುವ ಪ್ರಮುಖ ಪ್ರತಿರಕ್ಷೆ ಏನೆಂದರೆ, ದೂರಿನಲ್ಲಿ ನಮೂದಿಸಿದ ಚಿಟ್ ಸಂಖ್ಯೆಯು ಆರೋಪಿತನಿಗೆ ಸೇರಿದ್ದಾಗಿರುವುದಿಲ್ಲ, ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ಆರೋಪಿತನು ಪಡೆದುಕೊಂಡಿರುವುದಿಲ್ಲ. ಸದರಿ ಚಿಟ್ ಸಂಖ್ಯೆಯು ಚಂದ್ರಶೇಖರ ಕುದರಿರವರಿಗೆ ಸೇರಿದ್ದು ಹಾಗಾಗಿ ಆರೋಪಿಯು ನಿಪಿ.1 ರಲ್ಲಿ ನಮೂದಿಸಿರುವ ಹಣವನ್ನು ನೀಡುವ ಬಾದ್ಯಸ್ಥಿಕೆ ಇರುವುದಿಲ್ಲ ಎಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದು ಇರುತ್ತದೆ. ಸದರಿ ಸಂಗತಿಗೆ ಸಂಬಂಧಿಸಿದಂತೆ ದೂರುದಾರರನ್ನು ಆರೋಪಿಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲು ಈ ಕೆಳಗಿನಂತೆ ಇರುತ್ತದೆ.

> ದೂರಿನಲ್ಲಿ ನಮೂದಿಸಿರುವ ಚಿಟ್ ಸಂಖ್ಯೆ ಚಂದ್ರಶೇಖರ ಕುದರಿರವರಿಗೆ ಸೇರಿದ್ದು ಇರುತ್ತದೆ. ಸಾಕ್ಷಿಯು ಮುಂದುವರೆದು ಆರೋಪಿತನು ಸದರಿಯವರ ಸಾಲಕ್ಕೆ ಜಾಮೀನುದಾರನಾಗಿರುತ್ತಾನೆ ಎಂದು ನುಡಿಯುತ್ತಾರೆ.

ಈ ಮೇಲ್ಕಾಣಿಸಿದ ಪಾಟೀ ಸವಾಲನ್ನು ಗಮನಿಸಿದಾಗ, ಕಂಡು ಬರುವುದೇನೆಂದರೆ, ಸ್ಪಷ್ಟವಾಗಿ ಆರೋಪಿ ಪರ ವಕೀಲರು ದೂರಿನಲ್ಲಿ ನಮೂದಿಸಿರುವ ಚಿಟ್ ಸಂಖ್ಯೆಯು ಚಂದ್ರಶೇಖರವರಿಗೆ ಸೇರಿದ್ದು ಎಂಬ ಪ್ರಶ್ನೆಯನ್ನು ಕೇಳಿದ್ದು ಅದನ್ನು ಪಿರ್ಯಾದಿಯು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಪಿರ್ಯಾದಿಯು ಸದರಿ ಚಂದ್ರಶೇಖರ ಇವರ ಸಾಲಕ್ಕೆ ಆರೋಪಿತನು ಜಾಮೀನುದಾರನಾಗಿರುತ್ತಾನೆ ಎಂದು ನುಡಿಯುತ್ತಾರೆ. ಆದರೆ ದೂರನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆರೋಪಿತನೇ ಚಿಟ್ ಸಂಖ್ಯೆ G2F/0982/MSR/03 ರಲ್ಲಿ ಪಾಲ್ಗೊಂಡು ಹಣವನ್ನು ಪಡೆದು ತಮ್ಮ ಸ್ವಂತಕ್ಕೆ ಬಳಸಿಕೊಂಡಿರುತ್ತಾನೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಒಂದೊಮ್ಮೆ ಚಂದ್ರಶೇಖರ ಕುದರಿ ರವರಿಗೆ ಸೇರಿದ ಚಿಟ್‌ಗೆ ಆರೋಪಿ ಹಣ ಪಡೆಯಲು ಹೇಗೆ ಸಾಧ್ಯ? ಏಕೆಂದರೆ ಚಿಟ್ ಸಂಖ್ಯೆ G2F/0982/MSR/03 ಚಂದ್ರಶೇಖರ ರವರಿಗೆ ಸೇರಿದ್ದು ಇರುತ್ತದೆ. ಸದರಿಯವರು ಮಾತ್ರ ಬಿಡ್ಡಿಂಗನಲ್ಲಿ ಪಾಲ್ಗೊಂಡು ಹಣ ಪಡೆಯಲು ಕಾನೂನಿನಡಿಯಲ್ಲಿ ಅವಕಾಶವಿರುತ್ತದೆ. ಇದಕ್ಕೆ ಪೂರಕವೆಂಬಂತೆ ನಿಪಿ.6 ಲೆಡ್ಜರ ಪ್ರತಿಯನ್ನು ಗಮನಿಸಿದಾಗ ಆರೋಪಿತನು ಚಂದ್ರಶೇಖರ ಕುದರಿ ರವರ ಚಿಟ್ ಫಂಡಿನ 1 ನೇ ಜಾಮೀನುದಾರನಾಗಿರುವುದು ನಿಪಿ.6 ರ ದಾಖಲೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ಪಿರ್ಯಾದಿಯು ಸತ್ಯ ಸಂಗತಿಯನ್ನು ಮರೆಮಾಚುತ್ತಿರುವುದು ಕಂಡುಬರುತ್ತದೆ. ಮುಂದುವರೆದು, ಆರೋಪಿ ಪರ ವಕೀಲರು ಪಿರ್ಯಾದಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲು ಈ ಕೆಳಗಿನಂತೆ ಇರುತ್ತದೆ.

> ದೂರಿನ ಖಂಡಿಕೆ 3 ರಲ್ಲಿ ಆರೋಪಿತನು ಬಿಡ್ ನಲ್ಲಿ ಪಾಲ್ಗೊಂಡು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುತ್ತಾನೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿತನೇ ಹಣವನ್ನು ಪಡೆದುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ.

ಈ ಮೇಲ್ಕಾಣಿಸಿದ ಪಾಟೀ ಸವಾಲನ್ನು ಗಮನಿಸಿದಾಗ, ಕಂಡು ಬರುವುದೇನೆಂದರೆ, ಆರೋಪಿತನೇ ಬಿಡ್‌ನಲ್ಲಿ ಪಾಲ್ಗೊಂಡು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುತ್ತಾನೆ ಎಂದು ದೂರಿನಲ್ಲಿ ನಮೂದಿಸಿರುವ ಸಂಗತಿಯನ್ನು ದೂರುದಾರರು ಒಪ್ಪಿಕೊಳ್ಳುತ್ತಾರೆ. ಇದರಿಂದ ಕಂಡು ಬರುವುದೇನೆಂದರೆ ಆರೋಪಿಯು ದೂರಿನಲ್ಲಿ ನಮೂದಿಸಿರುವ ಚಿಟ್‌ನ ಸದಸ್ಯನಾಗಿರುವುದಿಲ್ಲ. ಚಿಟ್‌ನ ಸದಸ್ಯ ಬೇರೆ ವ್ಯಕ್ತಿ ಇರುತ್ತಾನೆ. ಹಾಗಾದಲ್ಲಿ

ಆರೋಪಿತನು ಹೇಗೆ ಹಣ ಪಡೆದುಕೊಂಡ, ಹೇಗೆ ಹಣವನ್ನು ಪಿರ್ಯಾದಿಯು ಆರೋಪಿತರಿಗೆ ನೀಡಿದರು ಎಂಬ ಬಗ್ಗೆ ದೂರಿನಲ್ಲಿ ಯಾವುದೇ ವಿವರಣೆ ನೀಡಿರುವುದಿಲ್ಲ. ಸದರಿ ಸಂಗತಿಯು ಕೂಡ ಸಾಕಷ್ಟು ಅನುಮಾನಗಳಿಗೆ ಅವಕಾಶ ಮಾಡಿಕೊಡುತ್ತದೆ. ಮುಂದುವರೆದು, ಆರೋಪಿ ಪರ ವಕೀಲರು ಪಿರ್ಯಾದಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲು ಈ ಕೆಳಗಿನಂತೆ ಇರುತ್ತದೆ.

> ಆರೋಪಿತನ ಹೆಸರಿನಲ್ಲಿ ಹಣವನ್ನು ವರ್ಗಾವಣೆ ಮಾಡಿರುವುದಿಲ್ಲ.

ಈ ಮೇಲ್ಕಾಣಿಸಿದ ಪಾಟೀ ಸವಾಲನ್ನು ಗಮನಿಸಿದಾಗ, ಕಂಡು ಬರುವುದೇನೆಂದರೆ, ಪಿರ್ಯಾದಿಯು ಹಣವನ್ನು ಆರೋಪಿಯ ಹೆಸರಿಗೆ ವರ್ಗಾವಣೆ ಮಾಡಿರುವುದಿಲ್ಲ ಎಂಬುವುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಈ ಮೊದಲೇ ಮೇಲೆ ಉಲ್ಲೇಖಿಸಿದ ಪಾಟೀ ಸವಾಲಿನಲ್ಲಿ ಆರೋಪಿತನೇ ಹಣವನ್ನು ಪಡೆದುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ ಮತ್ತು ದೂರಿನಲ್ಲಿ ಆರೋಪಿತನೇ ಹಣವನ್ನು ಪಡೆದುಕೊಂಡು ಸ್ವಂತಕ್ಕೆ ಬಳಸಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಇದರಿಂದ ಪಿರ್ಯಾದಿಯು ಒಂದೊಂದು ಹಂತದಲ್ಲಿ ಒಂದೊಂದು ರೀತಿಯ ಹೇಳಿಕೆ ನೀಡುತ್ತಿರುವುದು ಕಂಡುಬರುತ್ತದೆ ಮತ್ತು ಅವರ ಹೇಳಿಕೆಗಳಲ್ಲಿ ಸಾಕಷ್ಟು ದ್ವಂದ್ವ ಮತ್ತು ವ್ಯತಿರಿಕ್ತತೆ ಇರುವುದು ಕಂಡುಬರುತ್ತದೆ. ಇದರಿಂದ ಪಿರ್ಯಾದಿಯು ಸತ್ಯ ಸಂಗತಿಯನ್ನು ಮರೆಮಾಚುತ್ತಿರುವುದು ಕಂಡುಬರುತ್ತದೆ. ಮುಂದುವರೆದು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲು ಈ ಕೆಳಗಿನಂತೆ ಇರುತ್ತದೆ.

> ನನ್ನ ದೂರಿನಲ್ಲಾಗಲೀ, ನೋಟೀಸಿನಲ್ಲಾಗಲೀ, ಆರೋಪಿತನು ಚಂದ್ರಶೇಖರ ಕುದರಿ ರವರಿಗೆ ಜಾಮೀನುದಾರನಾಗಿರುತ್ತಾನೆ ಎಂದು ನಮೂದಿಸಿಲ್ಲ ಎಂದರೆ ಸರಿ.

ಈ ಮೇಲ್ಕಾಣಿಸಿದ ಪಾಟೀ ಸವಾಲನ್ನು ಗಮನಿಸಿದಾಗ, ಕಂಡು ಬರುವುದೇನೆಂದರೆ, ಪಿರ್ಯಾದಿಯು ತಮ್ಮ ದೂರಿನಲ್ಲಾಗಿಲೀ ನೋಟೀಸಿನಲ್ಲಾಗಲೀ, ಆರೋಪಿತನು ಚಂದ್ರಶೇಖರ ಕುದರಿ ರವರಿಗೆ ಜಾಮೀನುದಾರನಾಗಿರುತ್ತಾನೆ ಎಂಬ ಸಂಗತಿಯನ್ನು ದೂರಿನಲ್ಲಿ ಉಲ್ಲೇಖಿಸಿರುವುದಿಲ್ಲ ಎಂಬ ಸಂಗತಿಯನ್ನು ಒಪ್ಪಿಕೊಳ್ಳುತ್ತಾರೆ. ಈ ಸಂಬಂಧವಾಗಿ ದೂರನ್ನು ಮತ್ತು ನಿಪಿ.3 ನೋಟಿಸನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆರೋಪಿಯು ಪಿರ್ಯಾದುದಾರರ ಸಂಸ್ಥೆಯ ಸದಸ್ಯನಾಗಿದ್ದು, ಪಿರ್ಯಾದಿದಾರರ ಕಂಪನಿಯ ಟಿಕೇಟ್

ಸಂಖ್ಯೆ: G2F/0982/MSR/03 ರಡಿಯಲ್ಲಿ ಬಿಡ್ಡಿಂಗನಲ್ಲಿ ಪಾಲ್ಗೊಂಡು ಹಣವನ್ನು ಪಡೆದುಕೊಂಡಿರುವ ಕುರಿತು ಉಲ್ಲೇಖವಿರುತ್ತದೆ, ಆದರೆ ಪಾಟೀ ಸವಾಲಿನಲ್ಲಿ ಆರೋಪಿತನು ಜಾಮೀನುದಾರನೆಂದು ನುಡಿಯುತ್ತಾರೆ. ಇದರಿಂದ ಪಿರ್ಯಾದಿಯು ದೂರಿನಲ್ಲಿ ಒಂದು ರೀತಿಯಲ್ಲಿ ನಮೂದಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಒಂದು ಕಡೆ ಜಾಮೀನುದಾರನೆಂದು ನುಡಿಯುತ್ತಾರೆ, ಇನ್ನೊಂದು ಕಡೆ ಆರೋಪಿ ಹಣವನ್ನು ಪಡೆದುಕೊಂಡ ಎಂದು ನುಡಿಯುತ್ತಾರೆ. ಇದರಿಂದ ಪಿರ್ಯಾದಿಯು ಒಂದೊಂದು ಹಂತದಲ್ಲಿ ಒಂದೊಂದು ರೀತಿ ಹೇಳಿಕೆ ನೀಡಿ ಸತ್ಯ ಸಂಗತಿಯನ್ನು ಮರೆಮಾಚುತ್ತಿರುವುದು ಕಂಡುಬರುತ್ತದೆ. ಈ ಪ್ರಕರಣದಲ್ಲಿ ಆರೋಪಿತನು ತೆಗೆದುಕೊಳ್ಳುವ ಮತ್ತೊಂದು ಪ್ರಮುಖ ಪ್ರತಿರಕ್ಷೆ ಏನೆಂದರೆ, ದೂರಿನಲ್ಲಿ ಎಲ್ಲಿಯೂ ಸದರಿ ಚಂದ್ರಶೇಖರ ರವರು ಎಷ್ಟು ಮೊತ್ತದ ಹಣ ಮಂಜೂರಾಗಿರುತ್ತದೆ, ಎಷ್ಟು ಮೊತ್ತ ಬಾಕಿ ಇರುತ್ತದೆ ಮತ್ತು ಎಷ್ಟು ಮೊತ್ತ ಪಾವತಿಸಿರುತ್ತಾರೆ ಎಂದು ದೂರಿನಲ್ಲಿ ನಮೂದಿಸಿರುವುದಿಲ್ಲ ಹಾಗಾಗೀ, ಚೆಕ್ಕಿನಲ್ಲಿ ನಮೂದಿಸಿರುವ ಮೊತ್ತವು ಕಾನೂನುಬದ್ಧವಾಗಿ ವಸೂಲಿ ಮಾಡುವ ಹಣವಾಗಿರುವುದಿಲ್ಲ ಎಂಬ ಪ್ರತಿರಕ್ಷೆಯನ್ನು ಪಡೆದುಕೊಂಡಿದ್ದು ಇರುತ್ತದೆ. ಸದರಿ ಪ್ರತಿರಕ್ಷೆಗೆ ಸಂಬಂಧಿಸಿದಂತೆ ಆರೋಪಿ ಪರ ವಕೀಲರು ಪಿರ್ಯಾದಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲು ಈ ಕೆಳಗಿನಂತೆ ಇರುತ್ತದೆ.

> ಸದರಿ ಚಂದ್ರಶೇಖರ ರವರು ಎಷ್ಟು ಮೊತ್ತ ಮಂಜೂರಾಗಿರುತ್ತದೆ, ಎಷ್ಟು ಮೊತ್ತ ಬಾಕಿ ಇರುತ್ತದೆ ಮತ್ತು ಎಷ್ಟು ಮೊತ್ತ ಪಾವತಿಸಿರುತ್ತಾರೆ ಎಂದು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ನಾವು ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ.

ಈ ಮೇಲ್ಕಾಣಿಸಿದ ಪಾಟೀ ಸವಾಲನ್ನು ಗಮನಿಸಿದಾಗ, ಕಂಡು ಬರುವುದೇನೆಂದರೆ, ಚಂದ್ರಶೇಖರವರಿಗೆ ಎಷ್ಟು ಮೊತ್ತದ ಹಣ ಮಂಜೂರಾಗಿರುತ್ತದೆ, ಎಷ್ಟು ಮೊತ್ತದ ಹಣ ಬಾಕಿ ಇರುತ್ತದೆ ಮತ್ತು ಎಷ್ಟು ಮೊತ್ತದ ಹಣವನ್ನು ಪಾವತಿಸಿರುತ್ತಾರೆ ಎಂದು ದೂರಿನಲ್ಲಿ ನಮೂದಿಸಿರುವುದಿಲ್ಲ ಎಂಬ ಪ್ರಶ್ನೆಯನ್ನು ಆರೋಪಿ ಪರ ವಕೀಲರು ಕೇಳಿದ್ದು, ಅದಕ್ಕೆ ಪಿರ್ಯಾದಿಯು ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ಆದರೆ, ಈ ಸಂಬಂಧವಾಗಿ ದೂರನ್ನು ಗಮನಿಸಿದಾಗ ದೂರಿನಲ್ಲಿ ಎಲ್ಲಿಯೂ ಸಹ ಚಂದ್ರಶೇಖರ ರವರಿಗೆ ಎಷ್ಟು ಮೊತ್ತದ ಹಣ ಮಂಜೂರಾಗಿರುತ್ತದೆ, ಎಷ್ಟು ಮೊತ್ತದ ಹಣ ಬಾಕಿ ಇರುತ್ತದೆ ಮತ್ತು ಎಷ್ಟು ಮೊತ್ತ ಈಗಾಗಲೇ ಪಾವತಿಸಿರುವ ಕುರಿತು ಉಲ್ಲೇಖಿಸಿರುವುದಿಲ್ಲ ಮತ್ತು ಸದರಿ

ಸಂಗತಿಯನ್ನು ತಮ್ಮ ಮುಖ್ಯವಿಚಾರಣೆಯಲ್ಲಿಯು ಸಹ ಉಲ್ಲೇಖಿಸಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಹ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಸದರಿ ಸಂಗತಿಗಳು ಪಿರ್ಯಾದಿಯ ಪ್ರಕರಣವು ಸ್ಪಷ್ಟತೆ ಮತ್ತು ನಿಖರತೆಯಿಂದ ಕೂಡಿರುವುದಿಲ್ಲ ಹಾಗಾಗಿ ಪಿರ್ಯಾದಿಯು ಸತ್ಯ ಸಂಗತಿಯನ್ನು ಮರೆಮಾಚುತ್ತಿರುವುದು ಕಂಡುಬರುತ್ತದೆ. ಮುಂದುವರೆದು, ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲು ಈ ಕೆಳಗಿನಂತೆ ಇರುತ್ತದೆ.

> ನಿಡಿ.4 ಮತ್ತು 5 ರಲ್ಲಿ ಪಾವತಿಸಿರುವ ಹಣವನ್ನು ದೂರಿನಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ.

ಈ ಮೇಲ್ಕಾಣಿಸಿದ ಪಾಟೀ ಸವಾಲನ್ನು ಗಮನಿಸಿದಾಗ, ಕಂಡು ಬರುವುದೇನೆಂದರೆ, ನಿಡಿ.4 ಮತ್ತು 5 ದಾಖಲೆಗಳನ್ನು ಆರೋಪಿ ಪರ ವಕೀಲರು ಪಿರ್ಯಾದಿಯನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ಪಿರ್ಯಾದಿಗೆ ಮುಖಾಬಲೆ ಮಾಡಿ ನಿಶಾನೆಗೊಳಪಡಿಸಿಕೊಂಡಿದ್ದು ಇರುತ್ತದೆ. ಸದರಿ ದಾಖಲೆಗಳು ಪಿರ್ಯಾದಿಯು ಚಿಟ್ ಕಂಪನಿಗೆ ಹಣ ಸಂದಾಯ ಮಾಡಿದ ರಸೀದಿಗಳಾಗಿದ್ದು, ಸದರಿ ದಾಖಲೆಗಳನ್ನು ಗಮನಿಸಿದಾಗ, ದಿನಾಂಕ 10.06.2024 ರಂದು ಚಂದ್ರಶೇಖರ ಕುದರಿ ರವರು ರೂ.9,500/- ಗಳನ್ನು ಪಾವತಿಸಿರುವುದು ಕಂಡುಬರುತ್ತದೆ ಮತ್ತು ಅದೇ ತೆರನಾಗಿ ದಿನಾಂಕ 03.05.2024 ರಂದು ಅದೇ ಚಂದ್ರಶೇಖರ ಕುದರಿ ರವರು ರೂ.20,000/- ಗಳನ್ನು ಪಾವತಿಸಿರುವುದು ಕಂಡುಬರುತ್ತದೆ. ಸದರಿ ಹಣವು ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಪಾವತಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ದೂರಿನಲ್ಲಿ ಎಲ್ಲಿಯೂ ಸಹ ಸದರಿ ಹಣ ಪಾವತಿಸಿರುವ ಬಗ್ಗೆ ನಮೂದಿಸಿರುವುದಿಲ್ಲ ಮತ್ತು ಸದರಿ ಹಣವನ್ನು ನಮೂದಿಸಲು ತೊಂದರೆ ಏನು ಇತ್ತು ಎಂಬುವುದನ್ನೂ ಸಹ ನಮೂದಿಸಿರುವುದಿಲ್ಲ. ಇದರಿಂದಲೂ ಸಹ ಪಿರ್ಯಾದಿ ಕಂಪನಿಯು ಸತ್ಯ ಸಂಗತಿಯನ್ನು ಮರೆಮಾಚುತ್ತಿರುವುದು ಕಂಡುಬರುತ್ತದೆ. ಈ ಮೇಲೆ ವಿವರಿಸಿದ ಎಲ್ಲ ಸಂಗತಿಗಳನ್ನು ಕೂಲಂಕುಷವಾಗಿ ಗಮನಿಸಿದಾಗ, ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುವ ಸಂಗತಿಗಳನ್ನು ಸ್ಪಷ್ಟ ಮತ್ತು ನಿಖರತೆಯಿಂದ ಪಿರ್ಯಾದಿ ಕಂಪನಿಯು ರುಜುವಾತುಪಡಿಸಿರುವುದಿಲ್ಲ. ಮುಂದುವರೆದು, ದೂರಿನ ಸಂಗತಿಗಳಿಗೂ, ಮುಖ್ಯವಿಚಾರಣೆಯ ಸಂಗತಿಗಳಿಗೂ ಮತ್ತು ಪಾಟೀ ಸವಾಲಿನ ಸಂಗತಿಗಳಿಗೂ ಸಾಕಷ್ಟು ದ್ವಂದ್ವ ಮತ್ತು ವ್ಯತಿರಿಕ್ತತೆ ಇರುವುದು ಕಂಡುಬರುತ್ತದೆ. ಹಾಗಾಗಿ ಈ ಮೇಲೆ ವಿವರಿಸಿದ ಸಂಗತಿಗಳಿಂದ ಪ್ರಶ್ನಿತ ನಿಪಿ.1 ಚೆಕ್ಕಿನಲ್ಲಿ ನಮೂದಿಸಿದ ಹಣವು ಕಾನೂನು

ಬದ್ಧವಾಗಿ ವಸೂಲಿ ಮಾಡುವ ಹಣವಾಗಿರುವುದಿಲ್ಲ ಎಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ.

14. ಒಟ್ಟಾರೆಯಾಗಿ, ಈ ಮೇಲ್ಕಾಣಿಸಿದಂತೆ ಚರ್ಚಿಸಲಾದ ಅಂಶಗಳಿಂದ ಪಿರ್ಯಾದುದಾರರು ಆರೋಪಿಯ ವಿರುದ್ಧ ಹೊರಿಸಿರುವ ಆರೋಪಗಳನ್ನು ಸೂಕ್ತವಾದ ಸಾಕ್ಷ್ಯಾಧಾರಗಳಿಂದ ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಆರೋಪಿ ಪಿರ್ಯಾದುದಾರರ ಪರ ಇರುವ ಪೂರ್ವಭಾವನೆ ಖಂಡಿಸಲು ಸಫಲರಾಗಿರುತ್ತಾರೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಹಾಗಾಗಿ ಅಂಶ ನಂ.1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. <u>ಅಂಶ-2</u> : ಈ ಮೇಲ್ಕಾಣಿಸಿದ ಅಂಶಕ್ಕೆ ಚರ್ಚಿಸಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಿರುತ್ತದೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ವರ್ಗಾವಣೆ ಲಿಖಿತಗಳ ಅಧಿನಿಯಮ 1881 ರ ಕಲಂ.138 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದಿಂದ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತನು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರ ಮತ್ತು ಅವನ ಪರ ಜಾಮೀನುದಾರನು ನೀಡಿರುವ ಜಾಮೀನನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳಿಸಲು ಕಛೇರಿಯವರಿಗೆ ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ಮಾಡಿ, ತಿದ್ದಿ ಸಹಿ ಮಾಡಿ ದಿನಾಂಕ 19ನೇ ಜೂನ್, 2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಘೋಷಣೆಯನ್ನು ಮಾಡಿರುತ್ತೇನೆ)

(ವಿಶ್ವನಾಥ ಯಮಕನಮರಡಿ)
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹುಬ್ಬಳ್ಳಿ

ಅನುಬಂಧ

ಫಿರ್ಯಾದುದಾರನ ಪರ ವಿಚಾರಿಸಲ್ಪಟ್ಟ ಸಾಕ್ಷಿದಾರರುಗಳ ವಿವರ :

ಪ್ರಾಸಾ-1 ಶ್ರೀ ಕೃಷ್ಣಮಾರ್ತಿ ಡಿ.ಟಿ. ತಿಮ್ಮೆಗೌಡ

ಫಿರ್ಯಾದುದಾರನ ಪರ ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲಾತಿಗಳು :

| | |
|---|---|
| ನಿಪಿ-1 | ಚೆಕ್ |
| ನಿಪಿ-2 | ಬ್ಯಾಂಕಿನವರು ನೀಡಿದ ಹಿಂಬರಹ |
| ನಿಪಿ-3 | ಕಾನೂನು ತಿಳುವಳಿಕೆ ಪತ್ರ |
| ನಿಪಿ-4 | ಅಂಚೆ ರಸೀದಿ |
| ನಿಪಿ-5 | ಅಂಚೆ ಸ್ವೀಕೃತಿ ಪತ್ರ |
| ನಿಪಿ-6 | ಸಾಲದ ಖಾತೆಯ ವಿವರ ಪಟ್ಟಿ |
| ನಿಪಿ-7 | ಅಧಿಕಾರ ಪತ್ರದ ದೃಢೀಕೃತ ನಕಲು |
| ನಿಪಿ.8 | ದೂರು |

ಆರೋಪಿತನ ಪರ ವಿಚಾರಿಸಲ್ಪಟ್ಟ ಸಾಕ್ಷಿದಾರರುಗಳ ವಿವರ :

ಇಲ್ಲಾ

ಆರೋಪಿತನ ಪರ ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲಾತಿಗಳು :

ನಿಡಿ.1 ರಿಂದ 5 ಹಣ ತಂಬಿದ ರಸೀದಿಗಳು

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹುಬ್ಬಳ್ಳಿ